ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp.44-50
©*IIMRD*, Mysuru

IIMRD JOURNALS
www.iimrd.com

# ಚಂಗಾಳ್ವರ ಕಾಲದ ಶೈವ ದೇವಾಲಯಗಳ ಒಂದು ಅಧ್ಯಯನ

**ಡಾ. ತ್ರಿವೇಣಿ ಅರಸ್**
ಸಹಾಯಕ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

**ಸಾರಾಂಶ: (Abstract):**

*ದಕ್ಷಿಣ ಕರ್ನಾಟಕವನ್ನಾಳಿದ ಅರಸು ಮನೆತನಗಳಲ್ಲಿ ಚಂಗಾಳ್ವರು ಸಹ ಒಂದು ಪ್ರಮುಖ ಅರಸು ಮನೆತನವಾಗಿದೆ. ಪಿರಿಯಾಪಟ್ಟಣ ಅಥವಾ ಸಿಂಹಪಟ್ಟಣ(ಸಿಂಗಪಟ್ಟಣ) ಚಂಗಾಳ್ವರ ಪ್ರಮುಖ ರಾಜಕೀಯ ಕೇಂದ್ರವಾಗಿತ್ತು. ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ, ಅರಕಲಗೂಡು, ಚನ್ನರಾಯಪಟ್ಟಣ, ಸೋಮವಾರಪೇಟೆ ಮುಂತಾದ ಪ್ರದೇಶಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಗಂಗರ ತರುವಾಯ ದಕ್ಷಿಣ ಕರ್ನಾಟಕದಲ್ಲಿ ರಾಜಕೀಯವಾಗಿ ಪ್ರಾಬಲ್ಯಕ್ಕೆ ಬಂದು ಚೋಳರ ಸಾಮಂತರಾಗಿದ್ದ ಚಂಗಾಳ್ವರು ನಂತರ ಸ್ವತಂತ್ರ ಅರಸರಾಗಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಕೃಷಿ ವಿಸ್ತರಣೆ, ನೀರಾವರಿ ಅಭಿವೃದ್ಧಿಗಾಗಿ ಕೆರೆಕಟ್ಟೆಗಳ ನಿರ್ಮಾಣ, ವ್ಯಾಪಾರ ವಾಣಿಜ್ಯ ಬೆಳವಣಿಗೆ, ದೇವಾಲಯಗಳ ಸ್ಥಾಪನೆ ಮುಂತಾದ ಸಾಂಸ್ಕೃತಿಕ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದು, ಇಲ್ಲಿ ಎರಡು ಶಬ್ದಗಳಿವೆ. ದೇವ ಮತ್ತು ಆಲಯ ಅಂದರೆ ದೇವರಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ಇರತಕ್ಕಂತಹ ಸ್ಥಾನ ಎಂದರ್ಥ.[1] ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಲ್ಲದೆ. ಇವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲಕರವಾಗಿರುವ ಒಂದು ತಾಣವಾಗಿವೆ. ಒಟ್ಟಾರೆ ಇವು ಸಮಾಜದ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ಪ್ರತೀಕ. ಹಾಗೆಯೇ ನಮ್ಮ ಭವ್ಯ ಸಾಂಸ್ಕೃತಿಕ ನೆಲೆಗಳಾಗಿವೆ.[2] ಒಟ್ಟಾರೆ ಮಾನವನು ತನ್ನ ಪ್ರಾಪಂಚಿಕ ಸುಖವನ್ನು ಪಡೆಯಲು, ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಆತನನ್ನು ಧ್ಯಾನಿಸಲು, ಮನಸ್ಸಿಗೆ ಶಾಂತತೆ ಪಡೆಯಲು ದೇವಾಲಯಗಳು ಅವಶ್ಯಕವಾಗಿವೆ.[3] ಈ ಹಿನ್ನೆಲೆಯಲ್ಲಿ ಚಂಗಾಳ್ವರ ಕಾಲದ ಶೈವ ದೇವಾಲಗಳನ್ನು ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಚಂಗಾಳ್ವ, ದೇವಾಲಯ, ಬೆಟ್ಟದಪುರ, ಶೈವ ದೇವಾಲಯ, ಪಿರಿಯಾಪಟ್ಟಣ, ಮಿರ್ಲೆ, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಾಲಯ.

**ಪೀಠಿಕೆ:**

ಚಂಗಾಳ್ವರು ಆಳ್ವಿಕೆ ಮಾಡಿದ ಪ್ರದೇಶದಲ್ಲಿ ಶೈವ, ವೈಷ್ಣವ ಮತ್ತು ಜೈನ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು ಹಾಗೂ ಬಸದಿಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಸಣ್ಣ ಪ್ರಮಾಣದಿಂದ ಹಿಡಿದು ಬೃಹತ್ ಗಾತ್ರದ ದೇವಾಲಯಗಳು, ಜೀನಾಲಯಗಳು ಮತ್ತು ಚೈತ್ಯಾಲಯಗಳು

*Please cite this article as:* ತ್ರಿವೇಣಿ ಅರಸ್. (2024). ಚಂಗಾಳ್ವರ ಕಾಲದ ಶೈವ ದೇವಾಲಯಗಳ ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 44–50

ನಿರ್ಮಾಣಗೊಂಡಿವೆ. ಅದರಲ್ಲೂ ಬೆಟ್ಟದಪುರ, ಸಾಲಿಗ್ರಾಮ, ಪಿರಿಯಾಪಟ್ಟಣ, ಅರಕಲಗೂಡು, ಕೃಷ್ಣರಾಜನಗರ, ಮಿರ್ಲೆ, ಕಲ್ಲಹಳ್ಳಿ, ಚಿಕ್ಕಹನಸೋಗೆ ಶೈವ ದೇವಾಲಯಗಳ ತಾಣವಾಗಿವೆ. ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಚಂಗಾಳ್ವರು ದೇವಾಲಯಗಳನ್ನು ನಿರ್ಮಿಸಿರುವುದರ ಜೊತೆಗೆ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಚಂಗಾಳ್ವರ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಶೈವ ದೇವಾಲಯಗಳನ್ನು ವಿಶ್ಲೇಷಿಸಲಾಗಿದೆ.

**ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಾಲಯ**

ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಗ್ರಾಮವು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಬೆಟ್ಟದಪುರವನ್ನು ದ್ವಾರಕೆಯಿಂದ ಬಂದ ವಿಕ್ರಮರಾಯನ ಮಗ ಚಂಗಲರಾಯನ ನಿರ್ಮಿಸಿದನೆಂದು ಪ್ರತೀತಿ ಇದೆ. ಈ ಪ್ರದೇಶವನ್ನು ಕದಂಬರು, ಗಂಗರು, ಚೋಳರು, ಚೆಂಗಾಳ್ವರು ಮತ್ತು ಕೊಂಗಾಳ್ವರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಸೇರಿದಂತೆ ರಾಜ್ಯವನ್ನಾಳಿದ ಪ್ರತಿಷ್ಠಿತ ಅರಸು ಮನೆತನಗಳು ಆಳ್ವಿಕೆ ಮಾಡಿರುರುವುದು ತಿಳಿದುಬರುತ್ತದೆ.[4] ಸಿಡಿಲು ಮಲ್ಲಿಕಾರ್ಜುನ ದೇವಾಲಯವು ಗ್ರಾಮದ ಹೊರಭಾಗದಲ್ಲಿ ಸುಮಾರು 1 ಕಿ.ಮೀ.ದೂರದಲ್ಲಿ ಪೂರ್ವ ದಿಕ್ಕಿಗೆ ಬೆಟ್ಟದ ಮೇಲೆ ಕಂಡುಬರುತ್ತದೆ. ಇದು ವೀರಭದ್ರೇಶ್ವರ ದೇವಾಲಯದಿಂದ ಅನತಿ ದೂರದಲ್ಲೇ ಸಿಡಿಲು ಮಲ್ಲಿಕಾರ್ಜುನ ದೇವಾಲಯವು ಎತ್ತರವಾದ ಬೆಟ್ಟದ ಮೇಲೆ ಕಂಡುಬರುತ್ತದೆ. ಇದನ್ನು ಮೊದಲು ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವೆಂದು ಕರೆಯುತ್ತಿರುವುದು ತಿಳಿದುಬರುತ್ತದೆ. ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ಸಿಡಿಲು ಮಲ್ಲಿಕಾರ್ಜುನಸ್ವಾಮಿಯಾದುದಕ್ಕೆ ಒಂದು ಇತಿಹಾಸವೇ ಇದೆ. ದೇವಾಲಯದಲ್ಲಿ ಪೂಜಾಕಾರ್ಯ ನಡೆಯುತ್ತಿರುವಾಗ ಭಕ್ತರೆಲ್ಲರೂ ಹೊರಾಂಗಣದಲ್ಲಿ ನೆರೆದಿದ್ದರು. ಅರ್ಚಕರು ಭಕ್ತಿಯಿಂದ ದೇವರ ಪೂಜೆ ನಡೆಸುತ್ತಿರುವಾಗ ಇದ್ದಕ್ಕಿದ್ದಂತೆ ಸಿಡಿಲು ವಾತಾಯಾನದ ಮೂಲಕ ಒಳ ಪ್ರವೇಶಿಸಿ ನೇರವಾಗಿ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಪ್ರದಕ್ಷಿಣೆ ಹಾಕಿ ಅಲ್ಲಿ ಯಾವ ಭಕ್ತರಿಗೂ ಸ್ವಲ್ಪವೂ ತಾಕದಂತೆ ಅದೇ ವಾತಾಯನದ ಮೂಲಕ ಹೊರಟು ಹೋಗುತ್ತದೆ. ಅಲ್ಲಿದ್ದ ಭಕ್ತರೆಲ್ಲರಿಗೂ ಆಶ್ಚರ್ಯವಾಗುತ್ತದೆ. ಆದ್ದರಿಂದ ಅನ್ನದಾನಿ ಮಲ್ಲಕಾರ್ಜುನಸ್ವಾಮಿಯನ್ನು ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಎಂದು ಕರೆಯಲಾಯಿತು.

ಸಂಗರಶೆಟ್ಟಹಳ್ಳಿಯ ಪಿಪ37ರ ಶಾಸನದಲ್ಲಿ ಕುಲೋತುಂಗ ಚೋಳ ಚಂಗಾಳ್ವ ಒಡೆಯಾತ್ಯ ದೇವರು ರಾಜ್ಯವಾಳುತ್ತಿರುವಾಗ ಚಂಗಾಳ್ವಶೆಟ್ಟಿಹಳ್ಳಿಯ ಭೂಮಿಯನ್ನು ಧರ್ಮಕ್ಕೆ ದಾನಕೊಟ್ಟು ಗಣಪತಿ ದೇವರನ್ನು ಪ್ರತಿಷ್ಠಾಪನೆ ಮಾಡಿಸಿ ಗದ್ದೆಯನ್ನು ದಾನ ಬಿಟ್ಟ ಮಾಹಿತಿಯನ್ನು ಉಲ್ಲೇಖಿಸುತ್ತದೆ.[5] ಪಿಪ 22ರ ಕ್ರಿ.ಶ. 1521ನೆಯ ಅಲ್ಪನಾಯಕನಹಳ್ಳಿಯ ಶಾಸನವು ಶ್ರೀವೀರನಂಜರಾಜ ದೇವರು ಮತ್ತು ಶ್ರೀ ಮನುಮಹಾದೇವದೇವೋತ್ತಮರು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಭೋಗಕ್ಕೆ ಅಲಪನಾಯಕಹಳ್ಳಿ ಗ್ರಾಮವನ್ನು ಉಂಬಳಿಯಾಗಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ.[6] ಅಯಿತನಹಳ್ಳಿಯ ಪಿಪ 103ರ ಕ್ರಿ.ಶ1565ನೆಯ ಶಾಸನವು ವೀರರಾಜವೊಡೆಯರು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಭೋಗ ನಯಿವೇದ್ಯಕ್ಕೆ ನಡೆಸುವ ಸಲುವಾಗಿ ಅಯಿತನಹಳ್ಳಿ ಗ್ರಾಮವನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ.[7] ಕ್ರಿ.ಶ.1586ನೆಯ ಬೆಟ್ಟದ ತುಂಗದ ಪಿಪ110ರ ಶಾಸನವು

ಶ್ರೀಕಂಠರಾಜದೇವ ಮತ್ತು ಪಿರಿಯಾರಾಜದೇವ ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗಭೋಗ ನಯಿವೇದ್ಯಕೆ ಭಕ್ತಿಪೂರ್ವಕವಾಗಿ ವೀರನಂಜರಾಯಪಟ್ಟಣದ ಸೀಮೆಯೊಳಾಗೊಂದು ಬೆಟ್ಟದ ತುಂಗದ ಸ್ಥಳವನ್ನು ಹಾಗೂ ಅದರ ಹತ್ತಿರದ ಗ್ರಾಮಗಳಾದ ಅನಿವಾಳು, ಲಕ್ಕೂರು, ಕಲ್ಲಹಳ್ಳಿ, ಹಂಡಗನಹಳ್ಳಿ, ಸುರಗಹಳ್ಳಿ, ಬೆಳಗುಲಿ, ಮರುದೂರು, ಕೊತ್ತವಳ್ಳಿಯನ್ನು ಉಂಬಳಿಯಾಗಿ ನೀಡಿದರು.[8]

ಪಿಪ71ರ ಕ್ರಿ.ಶ.1586ನೆಯ ಬೆಟ್ಟದಪುರ ಶಾಸನವು ಪಿರಿಯರಾಜದೇವ ತನ್ನ ತಂದೆ ಶ್ರೀಕಂಠವೊಡೆಯ ಮತ್ತು ತಾಯಿ ವಲ್ಲಭಂಮ ಹಾಗೂ ಸೋತ ಪಿರಿಯೊಡೆಯಗೆ ಪುಣ್ಯವಾಗಬೇಕೆಂದು ಶ್ರೀಗಿರಿ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗಭೋಗ ನಯಿವೇದ್ಯಕ್ಕೆ ವೀರ ನಂಜರಾಯಪಟ್ಟಣದ ಸೀಮೆಯೊಳಗಿನ ತುಂಗದ ಸ್ಥಳ ಮತ್ತು ಅದಕ್ಕೆ ಸಲುವ ಕೆಲವು ಗ್ರಾಮಗಳನ್ನು ದಾನ ನೀಡಿರುವುದನ್ನು ತಿಳಿಸಿದೆ.[9] ವಿಶೇಷವಾಗಿ ಸೋತ ಪಿರಿಯೊಡೆಯಗೆ ಪುಣ್ಯವಾಗಲೆಂದು ದಾನ ನೀಡಿರುವುದು ಬಹಳ ವಿಶಿಷ್ಟವಾದುದಾಗಿದೆ. ಪಿರಿಯಾಪಟ್ಟಣದ ಕ್ರಿ.ಶ.1590ನೆಯ 01ರ ಶಾಸನವು ಪಿರಿಯರಾಜದೇವ ಮಹಾ ಅರಸು ಸಿಂಗಪಟ್ಟಣವನ್ನು ಜೀರ್ಣೋದ್ಧಾರ ಮಾಡಿಸಿ ಸಿಂಗಪಟ್ಟಣವನ್ನು ಪಿರಿಯಾಪಟ್ಟಣ ಎಂಬ ಹೆಸರು ಪಡೆದಿದೆ.[10]

ಬ್ಯಾಡರಬೆಳಗುಲಿಯ ಪಿಪ27ರ ಕ್ರಿ.ಶ.1591ನೆಯ ಶತಮಾನಕ್ಕೆ ಸೇರಿದ ಶಾಸನವು ಪಿರಿಯರಾಜಯ್ಯದೇವನು ತನ್ನ ಮಗ ಪ್ರಾಣಧಾರೆಯ ಪಿರಿಯೊಡೆರಿಗೆ ಕೈಲಾಸ ಪ್ರಾಪ್ತಿ ಅಗಲಿ ಎಂದು ಶ್ರೀ ಗಿರಿ ಅಂನದಾನಿ ಮಲ್ಲಿಕಾರ್ಜುನ ಸ್ವಾಮಿಯ ಕಾರ್ತಿಕ ಪೂಜೆಯ ದೀಪಕ್ಕೆ ನೀಡಿದ ದಾನವನ್ನು ಉಲ್ಲೇಖೀಸಿದೆ.[11] ಕ್ರಿ.ಶ. 1590ನೆಯ ಬೆಟ್ಟದಪುರದ ಪಿಪ62ರ ಶಾಸನವು ಪಿರಿಯಾರಾಜದೇವನು ತನ್ನ ಪಟ್ಟಣದ ರಾಣಿವಾಸಕ್ಕೆ ಕೈಲಾಸ ಪ್ರಾಪ್ತಿಯಾಗಲಿ ಎಂದು ಶ್ರೀ ಗಿರಿ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಶಿವರಾತ್ರಿ ತಿತಿಗೆ ನೀಡಿದ ದಾನವನ್ನು ತಿಳಿಸುತ್ತದೆ. ಪಿರಿಯಾರಾಜಯ್ಯ ಶಾಸನಗಳೆಲ್ಲವೂ ತನ್ನ ತಂದೆ ತಾಯಿ, ಮಗ, ರಾಣಿ, ಅಣ್ಣ ಇವುರುಗಳಿಗೆ ಪುಣ್ಯ ಪ್ರಾಪ್ತಿಯಾಗಲಿ ಎಂದು ಅನೇಕ ದಾನವನ್ನೇ ಉಲ್ಲೇಖಿಸಿವೆ.[12] ಇವುಗಳಿಗೆ ರಾಜಕೀಯ ಮಹತ್ವಕ್ಕಿಂತ ಸಾಂಸ್ಕೃತಿಕ ಮಹತ್ವ ಅಧಿಕವಾಗಿದೆ. 1590ರ ವರೆಗಿನ ಅವನ ಶಾಸನಗಳಲ್ಲಿ ಹೆಸರಿನ ಜೊತೆಗೆ ಮಹಾಮಂಡಳಿಕ, ಮಂಡಲ್ಲೇಶ್ವರ ಕುಲೋತ್ತುಂಗ ಚಂಗಾಳ್ವ ಎಂಬ ಅಭಿದಾನ ಸೇರಿದೆ. ಪರಿಯಾರಾಜದೇವನು ಸಿಂಗಪಟ್ಟಣವನ್ನು ಜೀಣೋದ್ಧಾರ ಮಾಡಿ ಪಿರಿಯಾಪಟ್ಟಣ ಎಂದು ಪುನರ್‌ನಾಮಕರಣ ಮಾಡಿದ ಮಾಹಿತಿಯನ್ನು ತಿಳಿಸುತ್ತದೆ. ಪಿಪ 25ನೆಯ ಕ್ರಿ.ಶ.1598ರ ಶಾಸನವು ಶ್ರೀ ಗಿರಿ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗ ಬೋಗ ನೈವೇದ್ಯಕ್ಕೆ ಸಲುವಾಗಿ ಸುರಗಹಳ್ಳಿ ಗ್ರಾಮವನ್ನು ದಾನ ನೀಡಿದ ಮಾಹಿತಿಯನ್ನು ತಿಳಿಸುತ್ತದೆ.[13]

ಮುದ್ದೇನಹಳ್ಳಿಯ ಕೃನ 14ರ ಕ್ರಿ.ಶ.1598ನೆಯ ಶಾಸನವು ಪಿರಿಯಾರಾಜಯ್ಯ ದೇವರುದ್ರಣನು ತನ್ನ ತಂದೆ ತಾಯಿ ಮತ್ತು ಕುಟುಂಬಕ್ಕೆ ಕೈಲಾಸವಾಗಲಿ ಎಂದು ಸುತ್ತೂರು ಮಠದ ಕಪ್ಪಿನಂಜೇದೇವರಿಗೆ ಕೊಟ್ಟ ದಾನವನ್ನು ಮತ್ತು ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಗಿರಿಯ ಮೇಲೆ ಕಲ್ಲುಮಂಟಪವನ್ನು ಕಟ್ಟಿಸಿ ಬೆಟ್ಟದ ಮೇಲೆ ವೀರೇಶ್ವರ ಮತ್ತು ಬಸವೇಶ್ವರ ದೇವರನ್ನು ಪ್ರತಿಷ್ಠಾಪಿಸಿ 2 ದೇವಾಲಯಗಳಿಗೆ ಅರ್ಚಕ

ಮತ್ತು ವಾದಕ ಸೇವಾವರ್ಗದವರಿಗೆ ಕೊಟ್ಟ ದಾನವನ್ನು ತಿಳಿಸಿದೆ.[14] ಹಾರನಹಳ್ಳಿಯ ಪಿಪ10ರ ಕ್ರಿ.ಶ.1600ನೆಯ ರುದ್ರಗಣನ ಶಾಸನವು ತನ್ನ ತಾಯಿ ಮತ್ತು ತಂದೆಗೆ ಮುಕ್ತಿಯಾಗಲಿ ಎಂಬ ಉದ್ದೇಶದಿಂದ ಬೆಟ್ಟದಪುರದ ಶ್ರೀ ಗಿರಿಯನ್ನು ಭೈರವಪುರ ಎಂದು ಪುನರ್‌ನಾಮಕರಣ ಮಾಡಿರುವುದನ್ನು ಮತ್ತು ಜಾತ್ರೆಯ ಸಮಯದಲ್ಲಿ ಅನ್ನದಾನದ ಸಲುವಾಗಿ ದಾನ ಕೊಟ್ಟ ಮಾಹಿತಿಯನ್ನು ತಿಳಿಸುತ್ತದೆ.[15] ಪಿಪ59ರ ಕ್ರಿ.ಶ.1607ರ ಬೆಟ್ಟದಪುರ ಶಾಸನವು ಪಿರಿಯಾರಾಜಯ್ಯನು ಮಳಲವಾಡಿಯ ಸೀಮೆಯನ್ನು ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯ ಅಂಗರಂಗಭೋಗಕ್ಕೆ ಮತ್ತು ತಂದೆ ಕಡೆಯಿಂದ 10 ಹಾಗೂ ತಾಯಿ ಕಡೆಯಿಂದ 11 ಒಟ್ಟು 21 ಸೀಮೆಯನ್ನು ಮಾತಾಪಿತೃಗಳಿಗೆ ಪುಣ್ಯವಾಗಲಿ ಎಂದು ದಾನಕೊಟ್ಟ ಮಾಹಿತಿಯನ್ನು ತಿಳಿಸುತ್ತದೆ. ಅದೇ ಶಾಸನವು ನಂಜರಾಜಯ ಪಟ್ಟಣದ ಪಗುದಿಯನ್ನು ಕೊಟ್ಟು ಅನೇಕ ಗ್ರಾಮಗಳನ್ನು ದಾನ ನೀಡಿ ವೀರೇಶ್ವರ ಮತ್ತು ಬಸವೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅವುಗಳ ಅಂಗರಂಗ ಭೋಗಕ್ಕೆ ನೀಡಿದ ಮಾಹಿತಿಯನ್ನು ತಿಳಿಸಿದೆ.[16]

ರಾಮನಾಥಪುರದಅಗೂ72ರ ಕ್ರಿ.ಶ. 1607ನೆಯ ಶಾಸನವು ತಿರುಮಲರಾಜಯದೇವನು ಅಂನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಅಂಗರಂಗ ವೈಬೋಗಕ್ಕೆ ಮಳಲವಾಡಿ ಸೀಮೆಯೂ ನಂಜರಾಯ ಪಟ್ಟಣವನ್ನು ದಾನವಾಗಿ ಕೊಟ್ಟ ಮಾಹಿತಿಯನ್ನು ತಿಳಿಸಿದೆ.[17] ಮುದ್ದೇನಹಳ್ಳಿಯ ಕ್ರಿ.ಶ.17ನೇ ಶತಮಾನದ ಕೃನ 13ರ ಶಾಸನವು ರುದ್ರಗಣನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲಿ ಎಂದು ಗ್ರಾಮವನ್ನು ದಾನ ಮಾಡಿ ವೀರೇಶ್ವರ ಮತ್ತು ಬಸವೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅವುಗಳ ಅಂಗರಂಗ ಭೋಗಕ್ಕೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ.[18] ಪಿಪ20ರ ಕ್ರಿ.ಶ.1611ನೆಯ ಶಾಸನವು ಶ್ರೀಕಂಠರಾಜೊಡೆಯನ ಮಗನಾದ ಕುಮಾರ ಮಲ್ಲಿಕಾರ್ಜುನದೇವನು ಶ್ರೀ ಗಿರಿ ಅಂನ್ನದಾನಿ ಮಲ್ಲಿಕಾರ್ಜುನ ದೇವರ ಅಂಗರಂಗಬೋಗ ನೈವೈದ್ಯಕ್ಕೆ ಹಳಗನಹಳ್ಳಿಯಯನ್ನು ದಾನ ಕೊಟ್ಟ ಮಾಹಿತಿಯನ್ನು ತಿಳಿಸುತ್ತದೆ.[19] ಕ್ರಿ.ಶ.1612ರ ಪಿಪ8ರ ದೊಡ್ಡನೇರ್ಲೆ ಶಾಸನವು ವೀರಪರಾಜಯ್ಯನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲಿಯೆಂದು ಬರದಮೆರಳ ಸಮಯಚಾರದ ಮಠದ ಹಿರಿಯರಿಗೆ ತಿರುಮಲಪುರದ ಗ್ರಾಮವನ್ನು ಕೊಟ್ಟ ಮಾಹಿತಿಯನ್ನು ತಿಳಿಸುತ್ತದೆ.[20] ಪಿಪ90ರ ಕ್ರಿ.ಶ.1613ನೆಯ ಶಾಸನವು ನಂಜರಾಜಯ್ಯದೇವನು ಶ್ರೀ ಗಿರಿ ಅಂನ್ನದಾನಿ ಮಲ್ಲಿಕಾರ್ಜುನ ಸ್ವಾಮಿಗೆ ಅಂಗರಂಗ ಭೋಗಕ್ಕೆ ನೆಲವಾಡಿ ಗ್ರಾಮವನ್ನು ಉಂಬಳಿಯಾಗಿ ನೀಡಿದ ಮಾಹಿತಿಯನ್ನು ಉಲ್ಲೇಖಿಸುತ್ತದೆ.[21] ಪಿಪ13ರ ಕ್ರಿ.ಶ.1616ನೆಯ ಶಾಸನವು ವೀರರಾಜನು ದೇವಾಲಯದ ನಂದಾ ದೀಪಕ್ಕೆ ಮೇಲೂರು ಗ್ರಾಮವನ್ನು ದಾನ ನೀಡಿದ ಮಾಹಿತಿಯನ್ನು ತಿಳಿಸುತ್ತದೆ.[22] ಕ್ರಿ.ಶ.1619ನೆಯ ಪಿಪ43ರ ವೀರರಾಜನ ಶಾಸನವು ಶ್ರೀ ಮಲ್ಲಿಕಾರ್ಜುನ ದೇವರ ಅಂಗರಂಗ ಭೋಗವನ್ನು ನಡೆಸುವುದಕ್ಕೆ ತಂದೆ ತಾಯಿಗಳಿಗೆ ಪುಣ್ಯಪ್ರಾಪ್ತಿಯಾಗಿ ಕೈಲಾಸವಾಗಲಿ ಎಂದು ಬೆಕ್ಕರೆ ದೇವಾಲಯಕ್ಕೆ ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.[23] ಅಗೂ102ರ ಶಾಸನವು ಶ್ರೀಕಂಠರಾಜಯ ಮತ್ತು ಪಿರಿಯರಾಜರು ಶ್ರೀ ಗಿರಿ ಮಲ್ಲಿಕಾರ್ಜುನ ದೇವರಿಗೆ ಅಂಗರಂಗಭೋಗಕ್ಕೆ ದಾನ ನೀಡಿದ ಮಾಹಿತಿಯನ್ನು ತಿಳಿಸುತ್ತದೆ.[24]

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಎರಡು ಗರ್ಭಗುಡಿಯನ್ನು ಹೊಂದಿದೆ. ಒಂದು ಗರ್ಭಗುಡಿಯಲ್ಲಿ ಗಿರಿಜಮ್ಮ ದೇವಿ ಮತ್ತೊಂದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಶಿವಲಿಂಗವಿರುವ

ಗರ್ಭಗುಡಿಯ ಮುಂಭಾಗದಲ್ಲಿ ಸುಖನಾಸಿ, ನಾಲ್ಕು ಕಂಬಗಳುಳ್ಳ ನವರಂಗವಿದೆ. ನವರಂಗದ ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರವಿದೆ. ಈ ಕಂಬಗಳು ವೃತ್ತಾಕಾರದಲ್ಲಿದ್ದು ಸು.6ಅಡಿ ಎತ್ತರವುಳ್ಳವುಗಳಾಗಿವೆ. ನವರಂಗದ ಕಂಬಗಳ ಮೇಲೆ ಕಾಳಿಂಗಮರ್ದನ, ನಂದಿಸಹಿತ ಉಮಾಮಹೇಶ್ವರ ವೀರಾಂಜನೇಯ ನೃತ್ಯಮಾಡುತ್ತಿರುವ ಸ್ತ್ರೀಯ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದ ಬಲಭಾಗದಲ್ಲಿ ವೀರಭದ್ರೇಶ್ವರನ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದ ಬಲಭಾಗದಲ್ಲಿ ವೀರಭದ್ರೇಶ್ವರನ ವಿಗ್ರಹ ಮೂರ್ತಿಯನ್ನಿಡಲಾಗಿದೆ.

**ಅರಸೀಕೆರೆಯ ಅರ್ಕೇಶ್ವರ ದೇವಾಲಯ**

ಅರಸಿಕೇರೆಯ ರೈಲ್ವೆ ಮಾರ್ಗದ ಪೂರ್ವಭಾಗದಲ್ಲಿ ಅರ್ಕೇಶ್ವರ ದೇವಾಲಯವಿದೆ. ಕ್ರಿ.ಶ. 11ನೇ ಶತಮಾನದಲ್ಲಿ ಗಂಗರನ್ನು ಸೋಲಿಸಿದ ಚೋಳದೊರೆ ರಾಜೇಂದ್ರ ಚೋಳನ ಕಾಲದಲ್ಲಿ ನಿರ್ಮಿಸಿದನು ಎಂದು ಹೇಳಲಾಗುತ್ತದೆ. ಈ ದೇವಾಲಯ ಪ್ರಕೃತಿಯ ವಿಕೋಪಕ್ಕೆ ಒಳಗಾದಾಗ ಮೈಸೂರಿನ ಒಡೆಯರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಅರ್ಕೇಶ್ವರ ದೇವಾಲಯವನ್ನು ಪುನಃ ಜೀರ್ಣೋದ್ಧಾರ ಮಾಡಿಸಿದರು. ಈ ದೇವಾಲಯ ಏಕಕೂಟ ದೇವಾಲಯವಾಗಿದ್ದು, ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯದ ಗರ್ಭಗೃಹವು 8 ಅಡಿ ಉದ್ದ 8 ಅಡಿ ಅಗಲವಾಗಿದೆ. ಗರ್ಭಗೃಹದ ಮುಂದಿರುವ ಸುಖನಾಸಿ ಗರ್ಭಗೃಹದಷ್ಟು 8 ಅಡಿ ಉದ್ದ 8 ಅಡಿ ಅಗಲವಾಗಿದೆ. ಸುಖನಾಸಿಯ ಮಧ್ಯದಲ್ಲಿ ಶಿವನಿಗೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗವು 25 ಅಡಿ ಅಗಲ ಮತ್ತು 25 ಅಡಿ ಉದ್ದವಾಗಿದೆ. ನವರಂಗದ ಮುಂದೆ ನಿರ್ಮಿಸಲಾದ ಮೂಲ ಮುಖಮಂಟಪ ಮತ್ತು ಪಾತಾಳಂಕಣವನ್ನು ಮೈಸೂರು ಒಡೆಯರ ಕಾಲದಲ್ಲಿ ನಿರ್ಮಿಸಿದ್ದಾರೆ. ಈ ದೇವಾಲಯದ ಅದಿಷ್ಠಾನವು ಸರಳವಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಗರ್ಭಗೃಹದ ಮೇಲೆ ನಿರ್ಮಿಸಿರುವ ವಿಮಾನವು ದ್ರಾವಿಡ ಶೈಲಿಯಲ್ಲಿದೆ. ಇದು ಮೂರು ಹಂತಗಳಿಂದ ಕೂಡಿದೆ. ಈ ದೇವಾಲಯದ ಸುತ್ತಲೂ ಪ್ರಕಾರವನ್ನು ನಿರ್ಮಿಸಲಾಗಿದೆ. ದೇವಾಲಯದ ಎಡಭಾಗದಲ್ಲಿ ಒಂದಂಕಣದ ಒಂದು ಗುಡಿಯನ್ನು ನಿರ್ಮಿಸಿ ಅದರಲ್ಲಿ ಪಾರ್ವತಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಜೊತೆಗೆ ನೈರುತ್ಯ ಭಾಗದಲ್ಲಿ 16 ಕಂಬಗಳುಳ್ಳ ಒಂದು ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ.[25]

**ಮಿರ್ಲೆಯ ಅಮೃತೇಶ್ವರ ದೇವಾಲಯ**

ಮಿರ್ಲೆ ಗ್ರಾಮದಲ್ಲಿರುವ ಈ ಅಮೃತೇಶ್ವರ ದೇವಾಲಯ ಹಿಂದೆ 20 ಗದ್ದೆಯ ಮಧ್ಯದಲ್ಲಿತ್ತು. ಪ್ರಾಚ್ಯ ವಸ್ತು ಸಂಗ್ರಹಾಲಯದ ನಿರ್ದೇಶಕರಾಗಿದ್ದ ಡಾ.ನಾಗರಾಜುರವರು ಈ ದೇವಾಲಯವನ್ನು ಊರಿನೊಳಗೆ ನಿರ್ಮಾಣ ಮಾಡಿದ್ದಾರೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯನ್ನು ಹೊಂದಿದೆ ತಳವಿನ್ಯಾಸದಲ್ಲಿ ಗರ್ಭಗೃಹ, ಸುಖನಾಸಿ, ನವರಂಗವನ್ನು ಹೊಂದಿದೆ. ಇದರ ಅಧಿಷ್ಠಾನವು ಸರಳವಾಗಿದೆ. ಭಿತ್ತಿಯ ಭಾಗದಲ್ಲಿ ಕೋಷ್ಠ ಮಂಟಪ ಮತ್ತು ಅರೆಕಂಬಗಳಿವೆ. ಮೇಲ್ಭಾಗದಲ್ಲಿ ವಿಮಾನವಿಲ್ಲ, ಮೂಲಮಾರ್ಗದಲ್ಲಿ ಮಹಾಶಿವಲಿಂಗವಿದೆ. ಮೇಲ್ಭಗದಲ್ಲಿ ಮಹಾಶಿವಲಿಂಗವಿದೆ ಸುಖನಾಸಿ ನಂದಿಶಿಲ್ಪವಿದೆ ಮತ್ತು ಮೇಲ್ಭಾಗದಲ್ಲಿ ಭುವನೇಶ್ವರಿಯಿದೆ. ಈ ದೇವಾಲಯ ಹೊಯ್ಸಳರ ಲಕ್ಷಣವನ್ನು ಹೊಂದಿದ್ದು,[26]

ವಿಕಟ ದೇವಾಲಯವಾಗಿದೆ. ಜ್ಯೋತಿಮರ್ಹೇಶ್ವರ ದೇವಾಲಯ (ಸಾಲಿಗ್ರಾಮ) ಸಾಲಿಗ್ರಾಮದಿಂದ ಒಂದು ಕಿ.ಮೀ ದೂರದಲ್ಲಿರುವ ಸುಂದರ ದೇವಾಲಯ ಈ ಜ್ಯೋತಿರ್ಮಹೇಶ್ವರ ದೇವಾಲಯ. ಇದಕ್ಕೆ ಈಶ್ವರ, ಪ್ರಣವೇಶ್ವರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯದ ಮುಂದೆಯಿರುವ 12ನೇ ಶತಮಾನದ ಶಾಸನದಲ್ಲಿ ದೇವರ ಅಂಗಭೋಗ, ನೈವೇದ್ಯಕ್ಕಾಗಿ ದತ್ತಿ ಬಿಟ್ಟ ಬಗ್ಗೆ ಉಲ್ಲೇಖವಿದೆ.[27] ಈ ದೇವಾಲಯವನ್ನು ಸಂಪೂರ್ಣ ಬಳಪದ ಕಲ್ಲನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಇದರಲ್ಲಿ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಂಡುಬರುತ್ತವೆ.

**ಬೆಟ್ಟದಪುರದ ವೀರಭದ್ರೇಶ್ವರ ದೇವಾಲಯ**

ಈ ದೇವಾಲಯವು ಬೆಟ್ಟವನ್ನೇರುವಾಗ ಮಧ್ಯಮಾರ್ಗದಲ್ಲಿ ಬಲ ಭಾಗದಲ್ಲಿ ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದ್ದು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಪ್ರಸ್ತುತ ದೇವಾಲಯದ ಕೆಲವು ಭಾಗಗಳು ದುಸ್ಥಿತಿಯ ಹಂತ ತಲುಪಿದೆ. ಈ ದೇವಾಲಯವು ಚೌಕಾಕಾರದ ಸುಮಾರು 42 ಕಂಬಗಳನ್ನು ಹೊಂದಿದ್ದು ಕಂಬಗಳಲ್ಲಿ ಯಾವುದೇ ಚಿತ್ರ ಕೆತ್ತನೆಗಳಿಲ್ಲ. ಈ ದೇವಾಲಯ ಗರ್ಭಗುಡಿ ಸುಕನಾಶಿ, ನವರಂಗ ಹಾಗೂ ಮುಖಮಂಟಪಗಳನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ವೀರಭದ್ರೇಶ್ವರ ಮೂರ್ತಿಯನ್ನು ಪ್ರತಿಸ್ಥಾಪಿಸಲಾಗಿದೆ. ನವರಂಗದ ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರ ಹಾಗೂ ಮುಖಮಂಟಪಗಳಲ್ಲಿ ಚೌಕಕಾರವಾದ 8 ಕಂಬಗಳಿದ್ದು ಮಧ್ಯದಲ್ಲಿ ನಂದಿಯ ವಿಗ್ರಹವನ್ನು ಎತ್ತರವಾದ ಪೀಠದ ಮೇಲೆ ಕೂರಿಸಲಾಗಿದೆ. ದೇವಾಲಯದ ಭಿತ್ತಿಯಲ್ಲಿ ಯಾವುದೇ ಕೋಷ್ಟಕಗಳಾಗಲೀ ಅರೆಗಂಬಗಳಾಗಲೀ ಕಂಡು ಬರುವುದಿಲ್ಲ ಗರ್ಭಗುಡಿಯ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತಗೊಂಡಿರುವ ವೇಸರ ಶೈಲಿಯ ಶಿಖರವಿದ್ದು ಅದರ ಕೆಲವು ಭಾಗ ನಶಿಸಿವೆ. ಈ ದೇವಾಲಯದಲ್ಲಿ ಇಂದುಪೂಜಾಕಾರ್ಯ ನಡೆಯುವುದಿಲ್ಲ. ಆದರೂ ಈ ದೇವಾಲಯವು ಅಧ್ಯಯನದ ದೃಷ್ಠಿಯಿಂದ ಹೆಚ್ಚು ಉಪಯುಕ್ತವಾಗಿದೆ.[28]

ಹೀಗೆ ಚಂಗಾಳ್ವರ ಕಾಲದ ಆಡಳಿತ ಅವಧಿಯಲ್ಲಿ ಅರಸರು, ರಾಣಿಯರು ಸಾಮಂತರು, ವರ್ತಕರು ಶೈವ ದೇವಾಲಯ ನಿರ್ಮಿಸಿ ಅವುಗಳಿಗೆ ಭೂದಾನ ನೀಡಿ ಪ್ರಚಾರದಲ್ಲಿರುವಂತೆ ನೋಡಿಕೊಳ್ಳುವ ಕೆಲಸವನ್ನು ನಿರ್ವಹಿಸಿದರು. ಅಧಿಕಾರಿ ವರ್ಗದವರು ಧಾರ್ಮಿಕ ಕ್ಷೇತ್ರದಲ್ಲಿ ಭೂದಾನದ ಮಹತ್ವವನ್ನು ಅರಿತುಕೊಂಡು ಹೆಚ್ಚು ಹೆಚ್ಚು ಭೂದಾನವನ್ನು ದೇವಾಲಯ ಮತ್ತು ಬ್ರಾಹ್ಮಣರಿಗೆ ನೀಡಿರುವುದು ತಿಳಿದು ಬರುತ್ತದೆ. ಚಂಗಾಳ್ವರ ಆಳ್ವಿಕೆಯ ಉದ್ದಗಲಕ್ಕೂ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಭೂದಾನ ನೀಡಲಾಗಿತ್ತು. ಭೂದಾನ ನೀಡುವ ಸಂದರ್ಭದಲ್ಲಿ ಭೂದಾನಕ್ಕೆ ಧಾರ್ಮಿಕ ಮಹತ್ವ ನೀಡಲಾಗಿತ್ತು. ದೇವಾಲಯಗಳು ಆಡಳಿತ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಹೀಗೆ ಚಂಗಾಳ್ವ ಕಾಲದ ಶೈವ ದೇವಾಲಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

**ಕೊನೆಟಿಪ್ಪಣಿಗಳು**

1. ರಾಮಚಂದ್ರರಾವ್ ಎಸ್.ಕೆ, ಗುಡಿ ಜನರ ಜೀವನಾಡಿ, 1994.
2. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1979.

3. ರಾಮಯ್ಯಂಗರ್ ಎಸ್.ಕೆ, ಕೆಲವು ಧಾರ್ಮಿಕ ಕರ್ತವ್ಯಗಳು, 1999.
4. ಪಿರಿಯಾಪಟ್ಟಣ ತಾಲೂಕು ಗ್ಯಾಸೆಟಿಯರ್
5. ಎಕ–4, ಪಿಪ–37
6. ಎಕ–4, ಪಿಪ–22
7. ಎಕ–4, ಪಿಪ–103
8. ಎಕ–4, ಪಿಪ–110
9. ಎಕ–4, ಪಿಪ–71
10. ಎಕ–4, ಪಿಪ–01
11. ಎಕ–4, ಪಿಪ–27
12. ಎಕ–4, ಪಿಪ–62
13. ಎಕ–4, ಪಿಪ–25
14. ಎಕ–5, ಕೃನ–14
15. ಎಕ–4, ಪಿಪ–10
16. ಎಕ–4, ಪಿಪ–59
17. ಎಕ–4, ಪಿಪ–72
18. ಎಕ–5, ಕೃನ–13
19. ಎಕ–4, ಪಿಪ–20
20. ಎಕ–4, ಪಿಪ–8
21. ಎಕ–4, ಪಿಪ–90
22. ಎಕ–4, ಪಿಪ–13
23. ಎಕ–4, ಪಿಪ–43
24. ಎಕ–8, ಅಗೂ–102
25. ಕ್ಷೇತ್ರಕಾರ್ಯ ವರದಿ
26. ರಾಮದಾಸ ರೆಡ್ಡಿ ಎಸ್.ಜಿ., ಕ್ಷೇತ್ರಕಾರ್ಯ–2011, ಪು.ಸಂ.203, 04
27. ರಾಮದಾಸ್ ರೆಡ್ಡಿ, ಎಸ್.ಜಿ ಕ್ಷೇತ್ರಕಾರ್ಯ–2011 ಪು.ಸಂ.188
28. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ವರದಿ